ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮರಿತಿಬ್ಬೇಗೌಡ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1930

ಉತ್ತರಿಸಬೇಕಾದ ದಿನಾಂಕ : 23.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಆಗಿಂದ್ದಾಗ್ಗೆ ಯೋಜನೆ/ ಘಟಕ ವೆಚ್ಚಗಳನ್ನು ಪರಿಷ್ಕರಿಸಿ, ಅವಶ್ಯವಿರುವಷ್ಟು ಅಗತ್ಯಕ್ಕೆ ತಕ್ಕಂತೆ ಸಹಕಾರ ಸಂಘಗಳ ಮೂಲಕ ಸಾಲ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;	ಅಲ್ಪಾವಧಿ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷ ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಪಶುಸಂಗೋಪನೆ, ಕೃಷಿ ವಿಶ್ವವಿದ್ಯಾಲಯ, ಜಿಲ್ಲಾ ಲೀಡ್ ಬ್ಯಾಂಕ್, ನಬಾರ್ಡ್ ಹಾಗೂ ಪ್ರಗತಿಪರ ರೈತರನ್ನು ಒಳಗೊಂಡ ತಾಂತ್ರಿಕ ತಜ್ಞರ ಸಮಿತಿ ಸಭೆಯಲ್ಲಿ (ಜಿಲ್ಲಾ ಮಟ್ಟದ ತಾಂತ್ರಿಕ ತಜ್ಞರ ಸಮಿತಿ) ಪ್ರತಿ ಬೆಳೆಗೆ ತಗಲುವ ವೆಚ್ಚವನ್ನು ಆಧರಿಸಿ ಸ್ಕೇಲ್ ಆಫ್ ಫೈನಾನ್ಸ್ ನಿಗದಿಪಡಿಸಿ ರಾಜ್ಯ ಮಟ್ಟದಲ್ಲಿ ಅಧಿಸೂಚನೆ ಹೊರಡಿಸಲಾಗುತ್ತಿದೆ. ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಕ್ಕೆ ಸಂಬಂಧಿಸಿದಂತೆ ನಬಾರ್ಡ್‌ನಿಂದ ಕಾಲಕಾಲಕ್ಕೆ ಯುನಿಟ್ ಕಾಸ್ಟ್ (ಘಟಕ ವೆಚ್ಚ)ನ್ನು ಪ್ರತಿ ಯೋಜನೆ/ಘಟಕಕ್ಕೆ ನಿಗದಿಪಡಿಸಲಾಗುತ್ತಿದ್ದು, ಇದರ ಆಧಾರದ ಮೇಲೆ ಸಾಲ ವಿತರಿಸಲಾಗುತ್ತದೆ.
ಆ)	ಸಾಲ ಪಡೆದಿರುವ ಫಲಾನುಭವಿಗಳಿಂದ ಸಾಲದ ಹೊರಬಾಕಿ ಇರುವ ಬಗ್ಗೆ ದೃಢೀಕರಣವನ್ನು ಪಡೆಯಲು ಇರುವ ಮಾನದಂಡಗಳೇನು; (ವಿವರ ಒದಗಿಸುವುದು)	ಸಾಲ ಪಡೆದಿರುವ ಫಲಾನುಭವಿಗಳಿಂದ ಸಾಲದ ಹೊರ ಬಾಕಿ ಇರುವ ಮತ್ತು ಸಾಲದ ಸದುಪಯೋಗ ಕುರಿತು ಶೇ.10 ರಷ್ಟು ಸಾಲಗಾರರ ಮಾಹಿತಿಯನ್ನು ನಿಗದಿಪಡಿಸಿರುವ ನಮೂನೆಯಲ್ಲಿ ಪಡೆಯುತ್ತಿದ್ದು, ಸದರಿ ಮಾಹಿತಿಯನ್ನು ನಬಾರ್ಡ / ಅಪೆಕ್ಸ್ ಬ್ಯಾಂಕಿನ ಪರಿವೀಕ್ಷಣೆ ಸಮಯದಲ್ಲಿ ಹಾಜರು ಪಡಿಸಲಾಗಿರುತ್ತದೆ. ದೃಢೀಕರಣವನ್ನು ಪಡೆಯುವ ಬಗ್ಗೆ ನಿರ್ದಿಷ್ಟ ಮಾನದಂಡಗಳು ಇರುವುದಿಲ್ಲ.
ಇ)	ಶೂನ್ಯ ಬಡ್ಡಿ ದರದಲ್ಲಿ ನೀಡುತ್ತಿರುವ ಬೆಳೆ ಸಾಲದ ಮಿತಿಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಬೆಳೆಸಾಲದ ಮಿತಿಯನ್ನು ರೈತರು ಹೊಂದಿರುವ ಭೂ ಹಿಡುವಳಿ, ಬೆಳೆಯುವ ಬೆಳೆಗೆ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಆಧಾರವಾಗಿ ಸಾಲದ ಮಿತಿಯನ್ನು ನಿಗದಿಪಡಿಸುತ್ತಿದ್ದು, ಶೇ.75 ಕ್ಕಿಂತ ಹೆಚ್ಚಿನ ಸದಸ್ಯರು ಸಣ್ಣ ಮತ್ತು ಅತೀ ಸಣ್ಣ ರೈತರಾಗಿದ್ದು ಇವರ ಸಾಲದ ಗರಿಷ್ಠ ಮಿತಿ ರೂ.3.00 ಲಕ್ಷಗಳಿಗೆ ಮೀರಿರುವುದಿಲ್ಲ. ದೊಡ್ಡ ರೈತರಿಗೆ ಸಹಕಾರ ಸಂಘಗಳು ರೂ.3.00 ಲಕ್ಷಕ್ಕಿಂತ ಹೆಚ್ಚಿನ ಸಾಲ ಮಂಜೂರು ಮಾಡಿದ್ದಲ್ಲಿ, ಕೇಂದ್ರ ಸರ್ಕಾರದ ಯೋಜನೆಯಲ್ಲಿ ರೂ.3.00 ಲಕ್ಷಗಳವರೆಗೆ ನಿವ್ವಳ ಶೇ.4 ರ ಬಡ್ಡಿದರದಲ್ಲಿ ಸಾಲ ನೀಡಲು ಅವಕಾಶವಿರುತ್ತದೆ. ಆದ್ದರಿಂದ ರೂ.3.00 ಲಕ್ಷದವರೆಗಿನ ಶೂನ್ಯ ಬಡ್ಡಿದರದ ಸಾಲದ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ)	ದೀರ್ಘಾವಧಿ ಸಾಲಗಳ ಸಂಬಂಧ ರಿಯಾಯಿತಿ ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ದೀರ್ಘಾವಧಿ ಸಾಲಗಳ ಸಂಬಂಧ ರಿಯಾಯಿತಿ ಬಡ್ಡಿ ದರದಲ್ಲಿ ನೀಡುತ್ತಿರುವ ರೂ.10.00 ಲಕ್ಷಗಳವರೆಗಿನ ಸಾಲದ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಉ)	ಅಲ್ಪಾವಧಿ ಸಾಲ ನೀಡುತ್ತಿರುವ ಸಂಸ್ಥೆಗಳಲ್ಲಿ ಬಹಳಷ್ಟು ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರಿಸುವುದು)	ಹೌದು, ಅಲ್ಪಾವಧಿ ಸಾಲ ನೀಡುತ್ತಿರುವ ಸಂಸ್ಥೆಗಳಲ್ಲಿ ನಡೆದಿರುವ ಅವ್ಯವಹಾರದ ಮಾಹಿತಿಯನ್ನು **ಅನುಬಂಧ-1** ಹಾಗೂ **ಅನುಬಂಧ-2** ರಲ್ಲಿ ನೀಡಲಾಗಿದೆ.

ಸಂಖ್ಯೆ: ಸಿಒ 108 ಸಿಎಲ್‌ಎಸ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ-1

ಅಲ್ಪಾವಧಿ ಸಾಲ ನೀಡುತ್ತಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ನಡೆದಿರುವ ಅವ್ಯವಹಾರದ ಮಾಹಿತಿ (amt in lakhs)

Sl No	Name of the DCC bank	No of misappropriation noticed	of which No of misappr, proved	Amt of misap proved	no of employes Resposible	Amt recoverd	Amt yet to be recoverd	no of civil cases filed	No of civil cases under trial	No of criminal cases filed	No of criminal cases under trial
1	DCCB Vijaypur	1	1	3233.83	0	0.00	3233.83	1	1	1	1
2	KDCCB Sirsi	1	1	4.90	2	4.90	0	1	0	1	0
3	KCCB Dharwad	5	5	69.31	7	26.34	42.97	5	0	4	4
4	Mysore	4	4	220.32	11	0.00	220.32	0	0	3	3
5	Mandya	1	1	73.45	3	23.72	49.73	3	3	3	3
6	Hassan	2	2	40.48	17	36.14	4.34	0	0	0	0
7	Chikkamagalore	0	0	0.00	0	0.00	0.00	0	0	0	0
8	Kodagu	2	2	5.09	2	5.09	0.00	0	0	0	0
9	South Canar	2	2	469.45	3	208.42	263.03	1	1	1	1

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಪತ್ತು)
ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-556 002

(2)

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1930 ಕ್ಕೆ</u>

<u>ಅನುಬಂಧ-2</u>

ಕ್ರ.ಸಂ	ದುರುಪಯೋಗದ ವರ್ಷ	ಸಂಘದ ಹೆಸರು	ದುರುಪಯೋಗದ ಮೊತ್ತ (ರೂ. ಲಕ್ಷಗಳಲ್ಲಿ)	ದುರುಪಯೋಗದ ಸ್ವರೂಪ	ತೆಗೆದುಕೊಂಡ ಕ್ರಮ
ಮಂಡ್ಯ ಜಿಲ್ಲೆ					
1	2017	ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ರೂ.46.74	ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಕಾಲಾವಧಿಯಲ್ಲಿ ನಡೆದಿರುವ ಹಣದುರುಪಯೋಗ ಮತ್ತು ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆ ಮುಗಿದು, ಪ್ರಕರಣ 68ರ ನಿರ್ದೇಶನ ನೀಡಲಾಗಿದ್ದು, ಸದರಿ ಪ್ರಕಾರ ಪ್ರಕರಣ 69 ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ, ಮಂಡ್ಯ ರವರ ನ್ಯಾಯಾಲಯದಲ್ಲಿ ಅಧಿಭಾರ ಅರ್ಜಿ ದಾಖಲಿಸಲಾಗಿರುತ್ತದೆ.
2	2019	ಕೆ.ಶೆಟ್ಟಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ರೂ. 17.05	ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಆಡಳಿತ ಮಂಡಲಿಯ ಸದಸ್ಯರು 2010-11 ನೇ ಸಾಲಿನಿಂದ 2016-17 ನೇ ಸಾಲಿನವರೆಗೆ ನಡೆದಿರಬಹುದಾದ ಹಣದುರುಪಯೋಗ, ಕರ್ತವ್ಯಲೋಪ ಮತ್ತು ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆ ಮುಗಿದು, ಪ್ರಕರಣ 68ರಡಿ ನಿರ್ದೇಶನ ನೀಡಲಾಗಿರುತ್ತದೆ. ಮುಂದುವರೆದಂತೆ ಪ್ರಕರಣ 69 ರ ಅಧಿಭಾರ ಅರ್ಜಿ ದಾಖಲಿಸಲು ಬಾಕಿ ಇರುತ್ತದೆ.
3	2017	ಕೆ.ಗೌಡಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಂಡ್ಯ ತಾಲ್ಲೂಕು	ರೂ. 30.35	ಸಂಘದ ಮಾಜಿ ಮುಖ್ಯಕಾರ್ಯನಿರ್ವಹಣಾಧಿಕಾರಿಯಿಂದ	ಪ್ರಕರಣ 68 ರ ಆದೇಶದಂತೆ ವಸೂಲಾತಿಗೆ ನೋಟೀಸ್ ನೀಡಲಾಗಿದ್ದು, ಪ್ರಸ್ತುತ ಗೌರವಾನ್ವಿತ ಕರ್ನಾಟಕ ಉಚ್ಚ

				ನಡೆದಿರುವ ಹಣದುರುಪಯೋಗ, ಕರ್ತವ್ಯಲೋಪ ಮತ್ತು ಅವ್ಯವಹಾರ ಕುರಿತು	ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿಯಂತೆ ತಡೆಯಾಜ್ಞೆ ಪಡೆದಿದ್ದು, ಮುಂದುವರೆದ ಕ್ರಮ ಕೈಗೊಳ್ಳಲು ಬಾಕಿ ಇರುತ್ತದೆ.
4	2016	ಮಣಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ರೂ.19.68	ಕೇಂದ್ರ ಸರ್ಕಾರದ ಸಾಲಮನ್ನಾ ಯೋಜನೆಯ ಅವ್ಯವಹಾರದ ಕುರಿತಂತೆ	ಪ್ರಕರಣ 65 ರ ಪರಿವೀಕ್ಷಣೆಯು ಪೂರ್ಣಗೊಂಡಿದ್ದು, ಪ್ರಕರಣ 68ರ ಆದೇಶದಂತೆ ಸಂಘದ ಹಿಂದಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯ ವಿರುದ್ಧ ಪ್ರಕರಣ 69 ರಡಿಯಲ್ಲಿ ಅಧಿಭಾರ ಅರ್ಜಿಯನ್ನು ದಾಖಲಿಸಲಾಗಿರುತ್ತದೆ.
5	2017	ಮೆಣಸಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ರೂ.51.63	ಸಂಘದ ಸಾಲಗಳ ದುರ್ಬಳಕೆ ಮತ್ತು ಹಿಂದಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯ ದುರುಪಯೋಗದ ವ್ಯತ್ಯಾಸಗಳು	ಪ್ರಕರಣ 64 ರ ವಿಚಾರಣೆ ಪೂರ್ಣಗೊಂಡಿದ್ದು, ಪ್ರಕರಣ 68ರಂತೆ ವಸೂಲಾತಿಗೆ ಕ್ರಮವಿಡಲು ಬಾಕಿ ಇರುತ್ತದೆ.
6	2017	ಮಣಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ರೂ.66.02	ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆಯು ಪೂರ್ಣಗೊಂಡು ವರದಿಯು ಸ್ವೀಕೃತಗೊಂಡಿದ್ದು, ಅನುಪಾಲನಾ ವರದಿ ಸಲ್ಲಿಸಲು ಸಂಘಕ್ಕೆ ಪತ್ರ ಬರೆಯಲಾಗಿರುತ್ತದೆ.
7	2017	ಕ್ಯಾತಘಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ಜವಾಬ್ದಾರಿ ನಿಗಧಿಯಾಗಿಲ್ಲ.	ರಸಗೊಬ್ಬರ ಮಾರಾಟ ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.
8	2017	ಎಸ್.ಐ ಹೊನ್ನಲಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ಜವಾಬ್ದಾರಿ ನಿಗಧಿಯಾಗಿಲ್ಲ.	ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧಿಕಾರಿಗಳು ಭೇಟಿ ನೀಡಿದಾಗ ಕಂಡು ಬಂದ ನ್ಯೂನ್ಯತೆಗಳ	ಪ್ರಕರಣ 64 ರ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

				ಸಂಬಂಧ	
9	2017	ಯಲಾದಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ಜವಾಬ್ದಾರಿ ನಿಗಧಿಯಾಗಿಲ್ಲ.	ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.
10	2018	ಸಿ.ಎ ಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು	ಜವಾಬ್ದಾರಿ ನಿಗಧಿಯಾಗಿಲ್ಲ.	ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.
11	2018	ಯಲಿಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಂಡ್ಯ ತಾ॥	ಜವಾಬ್ದಾರಿ ನಿಗಧಿಯಾಗಿಲ್ಲ.	ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.
12	2018	ನೆಲಮಾಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಳವಳ್ಳಿ ತಾಲ್ಲೂಕು	ಜವಾಬ್ದಾರಿ ನಿಗಧಿಯಾಗಿಲ್ಲ.	ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.
13	2019	ಹೊಸಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮದ್ದೂರು ತಾ॥	ಜವಾಬ್ದಾರಿ ನಿಗಧಿಯಾಗಿಲ್ಲ.	ಹಣದುರುಪಯೋಗ ಮತ್ತು ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.
14	2021	ತಳಗವಾದಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಳವಳ್ಳಿ ತಾ॥	ಜವಾಬ್ದಾರಿ ನಿಗಧಿಯಾಗಿಲ್ಲ.	ಹಣದುರುಪಯೋಗ ಮತ್ತು ಅವ್ಯವಹಾರ ಕುರಿತು	ಪ್ರಕರಣ 64 ರ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.
ಕೊಡಗು ಜಿಲ್ಲೆ					
1	2017-18	ಚೆಯ್ಯಂಡಾಣೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,	ರೂ.116.00	ಹತ್ಯಾರು, ಗೊಬ್ಬರ, ಮತ್ತು ಕ್ರಿಮಿನಾಶಕ ಖೋತಾ	ಕಲಂ 69ರಡಿಯಲ್ಲಿ ದಾವೆಯನ್ನು ದಾಖಲಿಸಿದ್ದು, ಸದರಿ ದಾವೆಗೆ ಸಂಬಂಧಿಸಿದಂತೆ ಕಲಂ 103 ಎ.ಬಿ.ಜೆ ಆದೇಶ ನೀಡಿದ್ದು, ಸದರಿ ಆದೇಶದ ವಿರುದ್ಧ ಪ್ರತಿವಾದಿಗಳು ಮಾನ್ಯ ಕರ್ನಾಟಕ ಮೇಲ್ಮನವಿ ಪ್ರಾಧಿಕಾರ

					ಬೆಂಗಳೂರುರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಆದ ಕಾರಣ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಡಿಕೇರಿ ಉಪವಿಭಾಗ, ಮಡಿಕೇರಿ ನ್ಯಾಯಾಲಯದ ಕಡತವನ್ನು ಮಾನ್ಯ ಕರ್ನಾಟಕ ಮೇಲ್ಮನವಿ ಪ್ರಾಧಿಕಾರ ಬೆಂಗಳೂರುರಲ್ಲಿ ಸಲ್ಲಿಸಿದೆ ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆಯು ದಾಖಲಾಗಿರುತ್ತದೆ.
2	2018-19	ಮರಗೋಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,	ರೂ.70.34	ಗೊಬ್ಬರ, ಮತ್ತು ಕ್ರಿಮಿನಾಶಕ ಖೋತಾ ಹಾಗೂ ಬೈಲಾ ವಿರುದ್ಧವಾಗಿ ಸಾಲ ಮಂಜೂರು ಮಾಡಿರುವ ಬಗ್ಗೆ	ಕಲಂ 64ರಡಿ ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆಯು ಪ್ರಗತಿಯಲ್ಲಿದ್ದು, ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆಯು ದಾಖಲಾಗಿರುತ್ತದೆ.
3	2019-20	ಕಾನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,	ರೂ. 25.00	ಸಂಘದ ತೋಟದ ಗುತ್ತಿಗೆಯಲ್ಲಿ, ಗುತ್ತಿಗೆ ನವೀಕರಣ ಹಾಗೂ ತೋಟದ ನಿರ್ವಹಣೆಯಲ್ಲಿ ದುರುಪಯೋಗ ನಡೆದಿರುವ ಬಗ್ಗೆ	ಕಲಂ 65ರಡಿ ಪರಿವೀಕ್ಷಣೆಯು ಮುಕ್ತಾಯಗೊಂಡು, ಪರಿವೀಕ್ಷಣಾ ವರದಿಯನ್ನು ಪರಿವೀಕ್ಷಣಾ ಅಧಿಕಾರಿರವರು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಮಡಿಕೇರಿ ಉಪವಿಭಾಗ, ಮಡಿಕೇರಿರವರಿಗೆ ಸಲ್ಲಿಸಿದ್ದು, ಇದರಂತೆ ಕಲಂ 68ರಡಿ ನಿರ್ದೇಶನವನ್ನು ಕೂಡ ಸಂಘಕ್ಕೆ ನೀಡಲಾಗಿರುತ್ತದೆ. ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ.
	2020-21	ಕಾನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,	ಜವಾಬ್ದಾರಿ ನಿಗಧಿಯಾಗಿಲ್ಲ.	ಸಂಘದ ಅಮೃತ ಮಹೋತ್ಸವ ನಡೆಸಲು ಇಲಾಖಾನುಮತಿ ಪಡೆಯದೆ ಇರಲು ಹಾಗೂ ಸಂಘದ ತೋಟದ ಸಿಲ್ವರ್ ಮರದ ಅವ್ಯವಹಾರದ ಬಗ್ಗೆ	ಕಲಂ 64ರಡಿ ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆಯು ಪ್ರಗತಿಯಲ್ಲಿದ್ದು, ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆಯು ದಾಖಲಾಗಿರುತ್ತದೆ.
4	2019-20	ಚೆಟ್ಟಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,	ಜವಾಬ್ದಾರಿ	ಸಂಘದಲ್ಲಿ ಕಟ್ಟಡದ ಕಾಮಗಾರಿಯಲ್ಲಿ ಅವ್ಯವಹಾರ	ಕಲಂ 65ರಡಿ ಪರಿವೀಕ್ಷಣೆಗೆ ಆದೇಶಿಸಲಾಗಿದ್ದು, ಪರಿವೀಕ್ಷಣೆಯು

			ನಿಗಧಿಯಾಗಿಲ್ಲ.		ಪ್ರಗತಿಯಲ್ಲಿದ್ದು, ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆಯು ದಾಖಲಾಗಿರುತ್ತದೆ.
5	2019-20	ಸುಂಟಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,	ರೂ. 19.70	ಹಣದುರುಪಯೋಗ	ಕಲಂ 65ರಡಿ ಪರಿವೀಕ್ಷಣೆಯು ಮುಕ್ತಾಯಗೊಂಡು, ಪರಿವೀಕ್ಷಣಾ ವರದಿಯನ್ನು ಪರಿವೀಕ್ಷಣಾ ಅಧಿಕಾರಿರವರು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಮಡಿಕೇರಿ ಉಪವಿಭಾಗ, ಮಡಿಕೇರಿರವರಿಗೆ ಸಲ್ಲಿಸಿದ್ದು, ಇದರಂತೆ ಕಲಂ 68ರಡಿ ನಿರ್ದೇಶನವನ್ನು ಕೂಡ ಸಂಘಕ್ಕೆ ನೀಡಲಾಗಿರುತ್ತದೆ. ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ.

L S[signature]

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಪತ್ತು)
ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-560 002